**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಹತ್ತನೇ ಅಧಿವೇಶನ**

# ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–18)**

ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 284ರ ಪ್ರತಿಯೋಜನೆ.-** ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರ 284ನೇ ಪ್ರಕರಣಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"284. ಯಾವುದೇ ಬೀದಿಯನ್ನು ಸಾರ್ವಜನಿಕ ಬೀದಿಯನ್ನಾಗಿ ಘೋಷಿಸುವ ಅಧಿಕಾರ.-** (1) ಚರಂಡಿ ಸೇರಿದಂತೆ ಯಾವುದೇ ಖಾಸಗಿ ಬೀದಿಯು ಸಾರ್ವಜನಿಕರ ಸುರಕ್ಷತೆ ಮತ್ತು ಆರೋಗ್ಯಕ್ಕೆ ಅಪಾಯವಾಗುವಂಥ ಸ್ಥಿತಿಯಲ್ಲಿದ್ದರೆ ಕಮೀಷನರ್ ಆ ಖಾಸಗಿ ಬೀದಿಗೆ ಸಂಬಂಧಿಸಿದಂತೆ ತಾನೇ ಸ್ವತಃ ಅಥವಾ ಸದರಿ ಖಾಸಗಿ ಬೀದಿಯ ಮಾಲೀಕರ ಅಥವಾ ಅಂಥ ಬೀದಿಯ ಮುಂಭಾಗದಲ್ಲಿರುವ ಅಥವಾ ಹೊಂದಿಕೊಂಡಿರುವ ಕಟ್ಟಡದ ಅಥವಾ ಭೂಮಿಗಳ ಮಾಲೀಕರ ಕೋರಿಕೆಯ ಮೇರೆಗೆ ಸಾರ್ವಜನಿಕ ನೋಟೀಸು ಮತ್ತು ಅಂಥ ಮಾಲೀಕರಿಗೆ ನೋಟಿಸ್ ನೀಡುವ ಮೂಲಕ ಸದರಿ ಖಾಸಗಿ ಬೀದಿ ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿಯನ್ನಾಗಿ ಘೋಷಿಸುವ ಅದರ ಉದ್ದೇಶವನ್ನು ತಿಳಿಸತಕ್ಕದ್ದು. ಆನಂತರ, ಅಂಥ ಮಾಲೀಕರು ಅಥವಾ ಯಾರೇ ಹಿತಾಸಕ್ತಿಯುಳ್ಳ ವ್ಯಕ್ತಿಯು ಸದರಿ ಉದ್ದೇಶದ ವಿರುದ್ಧ ಯಾವುದೇ ಆಕ್ಷೇಪಣೆಗಳೇನಾದರು ಇದ್ದರೆ ಅಂಥ ಸಾರ್ವಜನಿಕ ನೋಟಿಸ್ ಜಾರಿ ಮಾಡಿದ ದಿನಾಂಕದಿಂದ ಒಂದು ತಿಂಗಳ

ಒಳಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಕಮೀಷನರ್ ಆಕ್ಷೇಪಣೆಗಳೇನಾದರು ಇದ್ದರೆ, ಅವುಗಳನ್ನು ಪರಿಶೀಲಿಸಿದ ತರುವಾಯ ಅಂಥ ಬೀದಿ ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿ ಎಂಬುದಾಗಿ ಘೋಷಿಸಬಹುದು:

ಪರಂತು, ಖಾಸಗಿ ಬೀದಿಯು ಒಂದಕ್ಕಿಂತ ಹೆಚ್ಚಿನ ನಗರಪಾಲಿಕೆಗಳಲ್ಲಿ ಬರುವ ಸಂದರ್ಭದಲ್ಲಿ, ಸಂಬಂಧಪಟ್ಟ ಕಮೀಷನರ್‌ಗಳು ನೋಟಿಸ್ ನೀಡತಕ್ಕದ್ದು ಮತ್ತು ಆನಂತರ ತನ್ನ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಆ ಬೀದಿ ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿ ಎಂಬುದಾಗಿ ಘೋಷಿಸತಕ್ಕದ್ದು:

ಮತ್ತು ಪರಂತು, ಸಾರ್ವಜನಿಕ ಬೀದಿಯೆಂದು ಘೋಷಿಸುವ ಖಾಸಗಿ ಬೀದಿಯು ಸಾರ್ವಜನಿಕ ರಸ್ತೆ ಅಥವಾ ಸಾರ್ವಜನಿಕ ಬೀದಿಯಿಂದ ಸಂಪರ್ಕ ಹೊಂದಿರತಕ್ಕದ್ದು.

(2) ಬೀದಿ ಅಥವಾ ಅಂಥ ಬೀದಿಯ ಭಾಗವನ್ನು ಹಿಂದಿನ ಭೂ ಮಾಲೀಕನು ವರ್ಗಾವಣೆ ಅಥವಾ ಹಸ್ತಾಂತರಣದ ನೋಂದಾಯಿತ ಕ್ರಯಪತ್ರದಲ್ಲಿ ರಸ್ತೆಯನ್ನಾಗಿ ತೋರಿಸಿದ್ದಲ್ಲಿ ಮತ್ತು ಅದನ್ನಾಧರಿಸಿ ಕಟ್ಟಡದ ನಿವೇಶನಕ್ಕೆ ಹೊಂದಿಕೊಂಡಿರುವಂತೆ ಭೂ ಮಾಲೀಕನು ಹೊಂದಿಕೊಂಡಿರುವ ಕಟ್ಟಡ ನಿವೇಶನಗಳನ್ನು ಮಾರಾಟ ಅಥವಾ ವರ್ಗಾವಣೆ ಮಾಡುವ ಮೂಲಕ ಅಂಥ ರಸ್ತೆ ಅಥವಾ ಬೀದಿಯ ಪ್ರಯೋಜನವನ್ನು ಪಡೆದುಕೊಂಡಿರುವಲ್ಲಿ ಮತ್ತು (1)ನೇ ಉಪ ಪ್ರಕರಣದ ಮೇರೆಗೆ ಅಂಥ ರಸ್ತೆಯನ್ನು ಸಾರ್ವಜನಿಕ ಬೀದಿಯಾಗಿ ಘೋಷಿಸಿರುವಲ್ಲಿ, ಭೂ ಮಾಲೀಕನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 14ಬಿ ಪ್ರಕರಣದ ಮೇರೆ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರ ಸೇರಿದಂತೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಜಿತ ಪರಿಹಾರ, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಹಕ್ಕು ಅಧಿನಿಯಮ, 2013(2013ರ ಕೇಂದ್ರ ಅಧಿನಿಯಮ 30) ಅಥವಾ ಯಾವುದೇ ಇತರೆ ಕಾನೂನಿನ ಅಡಿಯಲ್ಲಿ ಯಾವುದೇ ರೀತಿಯ ಪರಿಹಾರಕ್ಕೆ ಅರ್ಹನಾಗತಕ್ಕದ್ದಲ್ಲ.

**ವಿವರಣೆ I:** "ಹಿಂದಿನ ಭೂ ಮಾಲೀಕರು" ಎಂದರೆ, ನಿವೇಶನಗಳನ್ನು ಮಾರಾಟ ಮಾಡುವ ಸಮಯದಲ್ಲಿ ಯಾವ ವ್ಯಕ್ತಿಯ ಹೆಸರಿನಲ್ಲಿ ಕೃಷಿ ಅಥವಾ ಪರಿವರ್ತಿತ ಭೂಮಿ ಇತ್ತೋ ಆ ವ್ಯಕ್ತಿ ಮತ್ತು ಆತನ ಮೇರೆಗೆ ಅಥವಾ ಮೂಲಕ ಕ್ಲೇಮು ಮಾಡುವ ಎಲ್ಲ ವ್ಯಕ್ತಿಗಳನ್ನು ಒಳಗೊಂಡಿರುತ್ತದೆ.

**ವಿವರಣೆ II:** "ಸಾರ್ವಜನಿಕ ಬೀದಿ" ಎಂದರೆ, ನಗರ ಪಾಲಿಕೆ ಅಥವಾ ಸರ್ಕಾರ ಅಥವಾ ಯಾವುದೇ ಸಾರ್ವಜನಿಕ ಪ್ರಾಧಿಕಾರಗಳು ನಿರ್ವಹಿಸುವ ದಾರಿಯ ಹಕ್ಕನ್ನು ಹೊಂದಿರುವ ಯಾವು ೯ ಬೀದಿ, ರಸ್ತೆ, ಚೌಕ, ಅಂಗಳ, ಓಣಿ, ಹಾದಿ ಅಥವಾ ಅದು ಹೆದ್ದಾರಿಯಾಗಿರಲಿ ಅಥವಾ ಇಲ್ಲದಿರಲಿ ಸವಾರಿ ಮಾರ್ಗ ಮತ್ತು ಈ ಮುಂದಿನವುಗಳನ್ನು ಒಳಗೊಂಡಿದೆ:-

(ಎ) ಯಾವುದೇ ಸಾರ್ವಜನಿಕ ಸೇತುವೆ ಅಥವಾ ಒಡ್ಡುದಾರಿ ಮೇಲಿನ ರಸ್ತೆ;

(ಬಿ) ಯಾವುದೇ ಅಂಥ ಬೀದಿ ಸಾರ್ವಜನಿಕ ಸೇತುವೆ ಅಥವಾ ಒಡ್ಡುದಾರಿಗೆ ಜೋಡಿಸಲಾದ ಪಾದಚಾರಿ ಮಾರ್ಗ; ಮತ್ತು

(ಸಿ) ಅಂಥ ಯಾವುದೇ ರಸ್ತೆ, ಸಾರ್ವಜನಿಕ ಸೇತುವೆ ಅಥವಾ ಒಡ್ಡುದಾರಿ ಮತ್ತು ಭೂಮಿಗೆ ಹೊಂದಿಕೊಂಡಿರುವ ಚರಂಡಿಗಳು, ಅಕ್ಕಪಕ್ಕದ ಸ್ವತ್ತುಗಳ ಗಡಿಗಳವರೆಗೆ ರಸ್ತೆಯ ಎರಡೂ ಬದಿಯಲ್ಲಿರುವ ಯಾವುದೇ ಪಾದಚಾರಿ ವರಾಂಡಾ ಅಥವಾ ಇತರ ನಿರ್ಮಾಣಗಳಿಂದ ಆವೃತವಾಗಿರಲೀ ಅಥವಾ ಇಲ್ಲದಿರಲೀ, ಆ ಸ್ವತ್ತು ಖಾಸಗಿಯೇ ಅಥವಾ ಸರ್ಕಾರದ ಸ್ವತ್ತಾಗಿರಲಿ ಅಥವಾ ಅದು ನಗರ ಪಾಲಿಕೆಗೆ ಸೇರಿದ್ದಾಗಿರಲಿ.”

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ಖಾಸಗಿ ಬೀದಿಗಳು ಮತ್ತು ಚರಂಡಿಗಳು ಕಳಪೆ ಸ್ಥಿತಿಯಲ್ಲಿದ್ದರೆ ಮತ್ತು ಸಾರ್ವಜನಿಕ ಸುರಕ್ಷತೆ ಮತ್ತು ಆರೋಗ್ಯಕ್ಕೆ ಅಪಾಯವನ್ನುಂಟುಮಾಡಿದರೆ ಅವುಗಳನ್ನು ಪೂರ್ವಭಾವಿಯಾಗಿ ಮಧ್ಯಪ್ರವೇಶಿಸಲು ಮತ್ತು ಸ್ವಾಧೀನಪಡಿಸಿಕೊಳ್ಳಲು ಕಮೀಷನರ್ ಅಥವಾ ಚೀಫ್ ಆಫೀಸರ್‌ಗೆ ಅಧಿಕಾರ ನೀಡುವುದು; ಮತ್ತು

(ii) ಪ್ರಾಧಿಕಾರದ ಸ್ವಂತ ಇಚ್ಛೆಯ ಮೇರೆಗೆ ಅಥವಾ ಖಾಸಗಿ ಬೀದಿ ಅಥವಾ ಪಕ್ಕದ ಸ್ವತ್ತುಗಳ ಮಾಲೀಕರ ಕೋರಿಕೆಯ ಮೇರೆಗೆ ಘೋಷಣೆಯ ಪ್ರಕ್ರಿಯೆ ಪ್ರಾರಂಭಿಸುವುದನ್ನು ಅನುಮತಿಸುವುದು;

(iii) ಹಿಂದಿನ ಭೂ ಮಾಲೀಕರ ಬೀದಿ ಭೂಮಿಗೆ ಪರಿಹಾರ ಅಥವಾ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರ ಪಡೆಯುವುದನ್ನು ತಡೆಯುವುದು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಡಾ. ಯತೀಂದ್ರ ಸಿದ್ದರಾಮಯ್ಯ**
ನಗರಾಭಿವೃದ್ಧಿ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಅನುಬಂಧ**

**ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976**

**(1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ**

**ಉದ್ಧೃತ ಭಾಗ**

**XXX XXX XXX**

**284. ಬೀದಿಗಳನ್ನು ಸಾರ್ವಜನಿಕ ಬೀದಿಗಳೆಂದು ಘೋಷಿಸುವಂತೆ ಅಗತ್ಯ ಪಡಿಸಲು ಮಾಲೀಕರ ಹಕ್ಕು.-** 283ನೇ ಪ್ರಕರಣದ ಉಪಬಂಧಗಳ ಮೇರೆಗೆ ಯಾವುದೇ ಬೀದಿಯನ್ನು ಮಟ್ಟ ಮಾಡಿದ್ದರೆ, ಅದಕ್ಕೆ ನೆಲಗಟ್ಟು ಮಾಡಿದ್ದರೆ, ಜಲ್ಲಿ ಹಾಕಿದ್ದರೆ, ಚಪ್ಪಡಿ ಹಾಸಿದ್ದರೆ, ಕಾಲುವೆ ಮಾಡಿದ್ದರೆ, ಒಳಚರಂಡಿಯನ್ನು ಮಾಡಿದ್ದರೆ, ಚರಂಡಿಯನ್ನು ಮಾಡಿದ್ದರೆ, ನಿರ್ಮಲೀಕರಿಸಿದ್ದರೆ ಮತ್ತು ದೀಪದ ವ್ಯವಸ್ಥೆ ಮಾಡಿದ್ದರೆ, ಅಂಥ ಬೀದಿಯನ್ನು ಆ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ತಿಳಿಸಿದ ಮಾಲೀಕರಲ್ಲಿ ಹೆಚ್ಚು ಮಂದಿಯ ಕೋರಿಕೆಯ ಮೇಲೆ ಸಾರ್ವಜನಿಕ ಬೀದಿ ಎಂದು ಘೋಷಿಸತಕ್ಕದ್ದು.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 500+100, 18ನೇ ಆಗಸ್ಟ್ 2026

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**TENTH SESSION**

# THE KARNATAKA MUNICIPAL CORPORATIONS (AMENDMENT) BILL, 2026
## (LA Bill No. 18 of 2026)

A Bill further to amend the Karnataka Municipal Corporations Act, 1976.

Whereas it is expedient further to amend the Karnataka Municipal Corporations Act, 1976 (Karnataka Act 14 of 1976), for the purposes hereinafter appearing;

Be it enacted by the Karnataka State Legislature in the seventy seventh year of the Republic of India as follows, namely:-

**1. Short title and Commencement.–** (1) This Act may be called the Karnataka Municipal Corporations (Amendment) Act, 2026.

(2) It shall come into force at once.

**2. Substitution of section 284.-** In the Karnataka Municipal Corporations Act, 1976 (Karnataka Act 14 of 1976), for section 284, the following shall be substituted, namely:-

**"284**. **Power to declare any street as public street.-** (1) If a private street including the drains are in such a poor condition that endangers public safety and health, the Commissioner may, with respect to a private street, on his own accord or upon a request by the owners of the said private street or the owners of the buildings and lands fronting or abutting on such a street, inform his intention to declare the said private street or part thereof, a public street, by a public notice and notice to such owners. Thereupon, such owners or anyone else interested, may give objections, if any, against the said intention within one month of the date of service of such the public notice by affixture. Upon considering the objections if any, the Commissioner may declare such street or part the street to be a public street:

Provided that, in case the private street falls in more than one Municipal Corporation then the concerned Commissioners shall issue the notice and thereupon declare the street or part thereof as a public street in respect to his jurisdiction.

Provided further that, the private street to be declared as public street shall have connectivity from the public road or public street.

(2) Where, a street or part of such street which was shown by the erstwhile land owner as road in the registered deed of transfer or conveyance made by the land owner and based upon which the abutting building sites were carved out by the land owner, who has obtained the benefit of such road or street by making the sale or transfer of abutting building sites and such a road is declared as public street under sub-section (1), the land owner, shall not be eligible for any type of compensation under the Right to Fair Compensation and Transparency in Land Acquisition, Rehabilitation and Resettlement Act, 2013 (Central Act 30 of 2013) or any other law, including Development Rights Certificate under section 14-B of the Karnataka Town and Country Planning Act, 1961 (Karnataka Act 11 of 1963).

**Explanation I**: "Erstwhile land owner" means the person in whose name the agriculture or converted or relevant land stood at the time of sale or transfer or conveyance of the sites and includes all those persons claiming under or through him.

**Explanation II:** "Public street" means any street, road, square, court, alley, passage or riding path over which the public have a right of way maintained by the Municipal Corporation or Government or by any public authority, whether a thorough fare or not and includes,-

(a) the roadway over any public bridge or causeway;

(b) the footway attached to any such street public bridge or causeway; and

(c) the drains attached to any such street, public bridge or causeway and the land, whether covered or not by any pavement verandah or other structure which lies on either side of the roadway up to the boundaries of the adjacent property, whether that property is private property or a property belonging to the Government or the Municipal Corporation."

## STATEMENT OF OBJECTS AND REASONS

It is considered necessary further to amend the Karnataka Municipal Corporation Act, 1976 (Karnataka Act 14 of 1976) to,-

(i) empower the Commissioner to proactively intervene and take over private streets and drains if they are in poor condition and endanger public safety and health;

(ii) allow the declaration process to be initiated on the authority's own accord or upon a request by the owners of the private street or abutting properties; and

(iii) prevent erstwhile land owners from claiming compensation or Development Rights Certificate for the street land.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**Dr. YATHINDRA SIDDARAMAIAH**
Minister for Urban Development

**M.K. VISHALAKSHI**
Secretary
Karnataka Legislative Assembly

**ANNEXURE**

**EXTRACT FROM THE KARNATAKA MUNICIPAL CORPORATIONS ACT, 1976 (KARNATAKA ACT 14 OF 1976)**

**X XX XXX XX X**

**284. Right of owners to require streets to be declared public.-** If any street has been levelled, paved, metalled, flagged, channelled, sewered, drained, conserved and lighted under the provisions of section 283, such street shall, on the requisition of a majority of the owners referred to in subsection (1) of that section, be declared a public street.

**X XX XXX XX X**

Govt. Press, Vikasa Soudha, Bengaluru, 18th August, 2026, P7, W.D. , Copies 500+100